ತನ್ನನ್ನೇ ಅಣಕಿಸುತ್ತಿವೆಯೇನೋ ಅನ್ನಿಸುತ್ತಿತ್ತು. ಆಯಾಸದಿಂದ ಕಣ್ಣೆಳೆಯತೊಡಗಿತು. ಕೊರಳಲ್ಲಿದ್ದ ಟವೆಲನ್ನು ಕಟ್ಟೆಯ ಮೇಲೆ ಹಾಸಿ ಮೈಚಾಚಿಕೊಂಡ. ತನ್ನ ಮುಂದಿನ ಯಾತ್ರೆಯನ್ನು ಸಂಕೇಶ್ವರಕ್ಕೆ ಬೆಳೆಸುವ ಬಗ್ಗೆ ತಲೆಯಲ್ಲಿಯೇ ನಕ್ಷೆ ಬರೆದುಕೊಳ್ಳುತ್ತ ನಿದ್ದೆ ಹೋದ. ಕಣ್ಬಿಟ್ಟಾಗ ರಾತ್ರಿಯಾಗಿತ್ತು. ಅಣ್ಣಪ್ಪನ ಹೋಟೆಲ್‌ನೆಡೆ ನಡೆದ. ಎಂದಿನಂತೆ ಬಾಕಿನ ಮೇಲೆ ಕುಳಿತುಕೊಳ್ಳಲು ಹೋದಾಗ, ಅವ ಕಣ್ಣಸನ್ನೆಯಲ್ಲಿ ಅವನನ್ನು ಒಳಗೆ ಕರೆದು ಕೂರಿಸಿದ. ಅವನ ಬೆನ್ನ ಹಿಂದೆ, ಪಕ್ಷವೊಂದರ ಕಾರ್ಯಕರ್ತರು ಮಿರ್ಚಿ ಕಡಿಯುತ್ತ, ಪಕ್ಷಕ್ಕೆ ಹಿಂಬಾಲಕರನ್ನು ಹುಟ್ಟುಹಾಕುವ ತಂತ್ರಗಳ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಹಸಿವು ನೀಗಿಸಿಕೊಂಡು, ಅಣ್ಣಪ್ಪ ಕೊಟ್ಟ ಕಂಬಳಿಯೊಂದಿಗೆ ಅರಳೀಕಟ್ಟೆಗೆ ಮರಳಿದಾಗ ಮಧ್ಯರಾತ್ರಿಯಾಗಿತ್ತು.

* * *

ವಾರ ಕಳೆದಿತ್ತು. ಒಂದು ಬೆಳಗ್ಗೆ ಕಣ್ಬಿಡುವ ಮೊದಲೇ ಒಂದಿಷ್ಟು ಜನ ಮಾತನಾಡಿಕೊಳ್ಳುತ್ತಿರುವುದು ಕೇಳಿಸಿತು. ಕನಸಿರಬೇಕೆಂದು ಮಗ್ಗಲು ಬದಲಿಸಿದ. 'ಬರೋಬ್ಬರ್ ಆತ ನೋಡೀಗ' ಒಬ್ಬ ಜೋರಾಗಿ ಸೀಟಿ ಹೊಡೆದ. ಇನ್ನೊಬ್ಬ ಚಪ್ಪಾಳೆ ತಟ್ಟಿದ. ಏನದು ಆಗಿದ್ದು? ತಿರುಗಿ ಎದ್ದು ಕುಳಿತ. ಎದುರಿನ ಸೊಸೈಟಿ ಕಟ್ಟಡದ ಮೇಲೆ ದೊಡ್ಡದೊಂದು ಫ್ಲೆಕ್ಸ್, ಕಿರೀಟ ತೊಟ್ಟು ಮಿನುಗುತ್ತಿದ್ದ 'ಮಿಸ್ ಲೋಖಂಡೆ'ಯ ಸಾಕ್ಷಾತ್ ದರ್ಶನ! ಹೊಟ್ಟೆಯಲ್ಲಿ ಯಾರೋ ಕೈ ಹಾಕಿ ತಿರುವಿದಂತಾಯಿತು. ಎದ್ದವನೇ ಫ್ಲೆಕ್ಸ್ ಬಳಿ ಹೋದ. ಅನ್ನಪೂರ್ಣಾ ಎಂಬ ಹೊಸ ಗ್ಯಾಸ್ ಸ್ಟೋ ಬ್ರ್ಯಾಂಡ್‌ನ ರಾಯಭಾರಿಯಾಗಿರುವ ರೂಪದರ್ಶಿ ಸಾರಿಕಾಗೆ ಸ್ಥಳೀಯ ಮುಖಂಡರುಗಳು ತಮ್ಮ ಫೋಟೋ ಸಮೇತ ಶುಭಹಾರೈಸಿದ್ದರು.

ಮರಳಿ ಅರಳೀಕಟ್ಟೆಗೆ ಮರಳಿದವನೇ, ಕೊಂಬೆಗೆ ನೇತುಹಾಕಿದ್ದ ತನ್ನ ಶೋಲ್ಡರ್ ಬ್ಯಾಗಿನಿಂದ ದಾಡೀ ಸೆಟ್ ತೆಗೆದು, ನುಣ್ಣಗೆ ಮೀಸೆ-ಗಡ್ಡವನ್ನು ಬೋಳಿಸಿಕೊಂಡುಬಿಟ್ಟ! ಹೊಟ್ಟೆ ಅಣ್ಣಪ್ಪನ ಅಂಗಡಿಗೆ ಕರೆದೊಯ್ದಿತು. ನೇರ ಅಡುಗೆಮನೆಗೆ ಹೋದ. ಸಿಂಗಲ್ ಬರ್ನರ್ ಗ್ಯಾಸೊಲೆ ಕೇಸರಿ ಜ್ವಾಲೆಗಳನ್ನು ಸುತ್ತೂಕಡೆ ಚಾಚಿಕೊಂಡು ಉರಿಯುತ್ತಿತ್ತು. ಅದರ ಮೇಲೆ ಆಲೂ ಭಾಜಿಯ ಕೊತಕೊತ. ಪಕ್ಕದಲ್ಲಿ ಕರಿದಿಟ್ಟ ಪೂರಿಗಳು. ಮಿಸಳ್ ಇನ್ನೂ ತಯಾರಾಗಿರಲಿಲ್ಲ. ಈಗೇನಿದೆಯೋ ಅದನ್ನೇ ಕೊಡು ಅಂದ. ಅಣ್ಣಪ್ಪ ಮೂರು ಪೂರಿ ಭಾಜಿ ಹಾಕಿಕೊಟ್ಟ. ಒಂದೇ ನಿಮಿಷದಲ್ಲಿ ಅವುಗಳನ್ನು ಮುಗಿಸಿದ. ಮತ್ತೆರಡು ಪೂರಿ ಹಾಕಿಸಿಕೊಂಡ. ಅದಾದ ಮೇಲೆ ಮತ್ತೆರಡು. 'ಬರಲಿ ಬರಲಿ' ಮತ್ತೂ ಸನ್ನೆ ಮಾಡುತ್ತಲೇ ಹೋದ. ಕೊನೆಗೆ ಅವ ಖಾಲೀ ಟ್ರೇ ತಂದು ಹಿಡಿದ. ನೀರಿನ ಮಗ್ ಎತ್ತಿ ಒಂದೇ ಏಟಿಗೆ ಖಾಲಿಮಾಡಿದ. ಉರಿಯುತ್ತಿದ್ದ ಸ್ಟೋ ಆಫ್ ಮಾಡಿ ಅಡುಗೆಮನೆಯನ್ನು ನಿಶ್ಶಬ್ದವಾಗಿಸಿ ಈಗಿಂದೀಗಲೇ ನನಗೆ ಒಂದು ಚಕ್ಕಡಿ ಅರಲು ಬೇಕು ಎಂದ. ಅಣ್ಣಪ್ಪ ಕೆರೆಯ ಕಡೆ ಕೈತೋರಿಸಿ ಮತ್ತಷ್ಟು ಪೂರಿ ಲಟ್ಟಿಸತೊಡಗಿದ.

ಮಾಬಳೇಶ ಮರುದಿನ ಅರಳೀಕಟ್ಟೆಯ ಮೇಲೆ ಚಕ್ಕಡಿಯಿಂದ ಮಣ್ಣು ಇಳಿಸಿಕೊಂಡ. ಗುಡ್ಡೆಹಾಕಿದ್ದ ಮಣ್ಣನ್ನು ಅಷ್ಟಷ್ಟೇ ಹದಮಾಡುತ್ತ ಅದಕ್ಕೆ ಒಲೆಯ ಆಕಾರ ಕೊಟ್ಟ. ಬಿಸಿಲೇರುವ ಹೊತ್ತಿಗೆ ಫೋರ್ ನಾಟ್ ಸೆವೆನ್ ಗಾಡಿ ಬಂದಿತು. ಅದರೊಳಗೆ ಕುರಿಗಳಂತೆ ತುಂಬಿಕೊಂಡು ಬಂದ ಹದಿನೆಂಟರಿಂದ ಇಪ್ಪತ್ತೈದರ ನಡುವಿನ ಗಂಡುಮಕ್ಕಳಿದ್ದರು. ಒಬ್ಬೊಬ್ಬರೇ ಕೆಳಗಿಳಿದರು. ಅವರನ್ನು ಕರೆತಂದ ಪಕ್ಷದ ಕಾರ್ಯಕರ್ತ, ಒಬ್ಬೊಬ್ಬರಿಗೂ ಒಂದೊಂದು ಶೇವುಖಾರಾ ಮತ್ತು ಪಾಕೀಟು ಹಂಚಿದ. ನೋಡನೋಡುತ್ತಿದ್ದಂತೆ ಅರಳೀಮರದ ಟೊಂಗೆಗಳಿಗೆ 'ಸನಾತನ ಪಾಕಪದ್ಧತಿ ಕಾರ್ಯಾಗಾರ' ಎಂಬ ಬ್ಯಾನರನ್ನೂ ಕಟ್ಟಿಬಿಟ್ಟ. ಈ ಪವಾಡವನ್ನು ಕಂಡು ಮಾಬಳೇಶನಿಗೆ ನೂರಾನೆ ಬಲ ಬಂದಿತು. ಅರಲನ್ನು ಇನ್ನೂ ಜಬರ್‌ದಸ್ತಾಗಿ ತುಳಿದ. ಎಲ್ಲರೂ ಅವನನ್ನು ಅನುಕರಿಸಿದರು.

ಕಾರ್ಯಕರ್ತ ಮೈಕ್ ಹಿಡಿದುಕೊಂಡು, 'ನಮ್ಮದಲ್ಲದ ಸಂಸ್ಕೃತಿಯನ್ನು ಹೇಗೆ ತುಳಿಯಬೇಕು?' ಗಂಟಲು ಹರಿದುಕೊಂಡ. ಹುಡುಗರಲ್ಲಿ ಕೆಲವರು ಗೋರಾ ಕುಂಬಾರನ ಸ್ಟೈಲನ್ನೂ, ಕೆಲವರು ಕೋಲಾಟದ ಗತ್ತನ್ನು ಅನುಸರಿಸಿದರು. 'ನಮ್ಮ ಆರೋಗ್ಯ?' ಎಂದಿತು ಮೈಕ್. 'ಮನೆಯ ಹೆಣ್ಣುಮಕ್ಕಳ ಕೈಯಲ್ಲೀ'. ಮತ್ತೆ ಮೈಕು, 'ಗ್ಯಾಸೊಲೆ?', 'ಭಾರತೀಯತೆಯ ಕಗ್ಗೊಲೆ' ಒಕ್ಕೊರಲಿನ ಧ್ವನಿ.

ದಿನವಿಡೀ ಅರಲಿನ ಮೇಲೆ ತಾಂಡವವಾಡಿದ್ದವರು ಸಂಜೆಯಾಗುತ್ತಿದ್ದಂತೆ ಪಾಕೀಟು ಒಡೆದು ಶಂಕರಿ ಸೇವಿಸಿ